ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಕ್ಫ್ ಮಂಡಳಿಯ ಆಸ್ತಿಗಳ ವಿವರ

1256 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ವಕ್ಫ್ ಮಂಡಳಿಗೆ ಸೇರಿದ ಆಸ್ತಿ, ಜಮೀನುಗಳು ಅಥವಾ ಪೂಜಾ ಮಂದಿರಗಳಾವುವು? (ಕ್ಷೇತ್ರವಾರು ವಿವರ ನೀಡುವುದು)*

ಆ) *ಈ ಮಂಡಳಿಯಿಂದ ಕಳೆದ2 ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?*

ಇ) *ಕಳೆದ ಎರಡು ವರ್ಷಗಳಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಮಸೀದಿ ರಿಪೇರಿ ಹಾಗೂ ಹೊಸ ಕಟ್ಟಡಗಳಿಗೆ ಧನ ಸಹಾಯ ಕೇಳಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು? ಆ ರೀತಿ ಎಷ್ಟು ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಕ್ಫ್ ಮಂಡಳಿಗೆ ಸೇರಿದ ಮಸೀದಿ ಸ್ವತ್ತು, ಭೂಮಿಗಳು ಯಾವುದೂ ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಭೂಮಿ, ಸ್ವತ್ತುಗಳು, ಮುಂತಾದವುಗಳು ಸಂಬಂಧಪಟ್ಟ ವಕ್ಫ್ ಸಂಸ್ಥೆಗಳಿಗೆ ಸೇರಿದವುಗಳಾಗಿರುತ್ತದೆ.

ಆ) ಕರ್ನಾಟಕ ಸರ್ಕಾರವು ವಕ್ಫ್ ಮಂಡಳಿಯ ಮೂಲಕ ಹೊಸ ಯೋಜನೆಗಳು ಅಂದರೆ, ಕರ್ನಾಟಕ ವಕ್ಫ್ ಕೌನ್ಸಿಲ್ ಮತ್ತು ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಶನ್ ಫಾರ್ ವುಮೆನ್ ಡೆವಲಪ್‌ಮೆಂಟ್ ಎಂಬ ಯೋಜನೆಗಳನ್ನು ಜಾರಿಗೆ ತಂದಿದೆ. ವಕ್ಫ್ ಕೌನ್ಸಿಲ್‌ನಡಿಯಲ್ಲಿ, ವಕ್ಫ್ ಸಂಸ್ಥೆಗಳಿಗೆ ವಾಣಿಜ್ಯ ಸಂಕೀರ್ಣ, ಕಮ್ಯೂನಿಟಿ ಹಾಲ್, ಮುಂತಾದವುಗಳನ್ನು ನಿರ್ಮಿಸಲು ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

ವಕ್ಫ್ ಫೌಂಡೇಶನ್ ಫಾರ್ ವುಮೆನ್ ಡೆವಲಪ್‌ಮೆಂಟ್ ಅಡಿಯಲ್ಲಿ ಬಡ ಮುಸ್ಲಿಂ ಮಹಿಳೆಯರ ಏಳಿಗೆಗಾಗಿ ಹೊಲಿಗೆ ಯಂತ್ರಗಳು, ಬೆರಳಚ್ಚು ಯಂತ್ರಗಳು, ಕಂಪ್ಯೂಟರ್ಸ್, ಮುಂತಾದವುಗಳನ್ನು ಒದಗಿಸಲು ಸಹಾಯಧನವನ್ನು ನೀಡಲಾಗುತ್ತಿದೆ.

ಇದರ ಜೊತೆಗೆ ವಕ್ಫ್ ಸಂಸ್ಥೆಗಳು ಅಂದರೆ, ಮಸೀದಿ, ದರ್ಗಾ, ಈದ್ಗಾ ಮುಂತಾದವುಗಳ ರಿಪೇರಿ ಮತ್ತು ಅಭಿವೃದ್ಧಿಗಾಗಿಯೂ ಸಹ ಹಣವನ್ನು ಮಂಜೂರು ಮಾಡಲಾಗುತ್ತಿದೆ.

ಇ) ಹಿಂದಿನ ಎರಡು ವರ್ಷಗಳು ಅಂದರೆ, 1996-97 ಮತ್ತು 1997-98ನೇ ಸಾಲಿನಲ್ಲಿ ಮಸೀದಿಗಳ ರಿಪೇರಿ ಮತ್ತು ನಿರ್ಮಾಣಕ್ಕಾಗಿ 6 ಅರ್ಜಿಗಳು ಬಂದಿದ್ದು, ಇದರಲ್ಲಿ ಒಂದು ಅರ್ಜಿಯನ್ನು ಪರಿಗಣಿಸಲಾಗಿದೆ.